# ವಿಶ್ವದ ಕಾರ್ಮಿಕರೇ ಒಂದಾಗಿ......

# GATWU Garment and Textile Workers Union
## ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್

## ಮೇ ದಿನಾಚರಣೆ - 2015

*ಪ್ರೀತಿಯ ಸಂಗಾತಿಗಳೇ,*

ಪ್ರತಿದಿನ ಬೆಳಗ್ಗೆಯಿಂದ ಸಂಜೆಯವರೆಗೆ ನಮ್ಮ ಬೆವರು ಬಸಿದು ನಾವು ಕಾರ್ಖಾನೆಯಲ್ಲಿ ದುಡಿಯುತ್ತಿದ್ದೇವೆ. ನಾವು ಹೊಲೆಯುವ ಫ್ಯಾಷನ್ ಬಟ್ಟೆಗಳನ್ನು ವಿದೇಶಿ ಮಾರುಕಟ್ಟೆಗಳಲ್ಲಿ ಸಾವಿರಾರು ರೂ.ಗಳಿಗೆ ಮಾರಾಟವಾಗುತ್ತದೆ. ಆದರೆ ನಮಗೆ ಸಿಗುತ್ತಿರುವುದು ಅದರ 2 ಭಾಗ ಮಾತ್ರ. ನಮಗೆ ನ್ಯಾಯವಾಗಿ ಸಿಗಬೇಕಾದ ವೇತನ ಕೇಳಿದರೂ ಮಾಲೀಕರು ದಬ್ಬಾಳಿಕೆ ಮಾಡಿ ಕೆಲವೊಮ್ಮೆ ಜಾಣತನದಿಂದ ಕುಂಟುನೆಪಗಳನ್ನು ನೀಡಿ ನುಣುಚಿಕೊಳ್ಳುತ್ತಿದ್ದಾರೆ.

ದಿನದಿನಕ್ಕೂ ಏರುತ್ತಿರುವ ಬೆಲೆಗಳು, ನಮ್ಮನ್ನು ಇನ್ನು ಕೆಳಮಟ್ಟದ ಜೀವನಕ್ಕೆ ತಳ್ಳುತ್ತಿವೆ. ಇದರೊಂದಿಗೆ ಕಾರ್ಖಾನೆಯಲ್ಲಿ ನಾವು ಮಾಡುವ ಕೆಲಸಕ್ಕೆ ಗೌರವವಿಲ್ಲ. 10-15 ವರ್ಷ ಅದೇ ಕಾರ್ಖಾನೆಗೆ ದುಡಿದು ನಮ್ಮ ಜೀವನ ಸವೆಸಿದರೂ ನಮ್ಮ ಸೇವೆಗೆ ತಕ್ಕ ಪ್ರತಿಫಲವಿಲ್ಲ, ಬದಲಾಗಿ ನಮ್ಮನ್ನು ಕೆಲಸದಿಂದ ತೆಗೆಯುವುದು ಹೇಗೆ, ವೇತನ ಕಡಿತಗೊಳಿಸುವುದು ಹೇಗೆ ಎಂಬ ಸಂಚುಗಳನ್ನು ಆಡಳಿತವರ್ಗವು ಮಾಡುತ್ತಿರುತ್ತದೆ. ಪ್ರತಿದಿನ ಕೆಲಸದ ಅಭದ್ರತೆ, ಆಡಳಿತ ವರ್ಗದ ಕಿರುಕುಳ, ಕೆಲಸದ ಒತ್ತಡ, ಅತಿ ಕಡಿಮೆ ವೇತನ, 8 ಗಂಟೆಗಿಂತ ಹೆಚ್ಚು ದುಡಿಮೆ, ಇವುಗಳ ವಿರುದ್ಧದ ಹೋರಾಟದಲ್ಲೇ ನಮ್ಮ ಕೆಲಸದ ಜೀವನ ಕಳೆದುಹೋಗುತ್ತಿದೆ.

ಗಾರ್ಮೆಂಟ್ಸ್ ಕಾರ್ಖಾನೆಗಳು ಗ್ರಾಮೀಣ ಪ್ರದೇಶಗಳಿಗೆ ಸ್ಥಳಾಂತರವಾಗುತ್ತಿರುವುದು ಇತ್ತೀಚಿನ ಅತಿ ಮುಖ್ಯ ಬೆಳವಣಿಗೆಯಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆ ಎಂಬ ಕಾರಣಕ್ಕೆ ಸರ್ಕಾರ ಇವರಿಗೆ ಜಾಗ, ನೀರು, ವಿದ್ಯುತ್‌ಗಳ ಬಳಕೆಗೆ ರಿಯಾಯಿತಿಯನ್ನು ಕೊಡುತ್ತಿದೆ. ಜೊತೆಗೆ ಇಲ್ಲಿ ಕಾರ್ಮಿಕರು ಅತಿ ಕಡಿಮೆ ವೇತನಕ್ಕೆ ಸಿಗುತ್ತಿರುವುದರಿಂದ ಕಳೆದ ಎರಡು ವರ್ಷಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ರಾಮನಗರ, ಮಂಡ್ಯ, ಮೈಸೂರು, ಕೋಲಾರ, ತುಮಕೂರು, ಶಿವಮೊಗ್ಗ ಈ ಜಿಲ್ಲೆಗಳಲ್ಲಿ ಗಾರ್ಮೆಂಟ್ಸ್ ಕಾರ್ಖಾನೆಗಳು ಪ್ರಾರಂಭವಾಗಿವೆ.

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಕಳೆದ 10 ವರ್ಷದಿಂದ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುತ್ತಿದೆ. 2014ರಲ್ಲಿ ಕನಿಷ್ಠ ವೇತನ ಪರಿಷ್ಕರಣೆಯಾಗುವ ನಿಟ್ಟಿನಲ್ಲಿ ನಾವು ನಡೆಸಿದ ಹೋರಾಟವು ಗಾರ್ಮೆಂಟ್ಸ್ ಕಾರ್ಮಿಕರ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲಾಗಿದೆ. ಹೋರಾಟದಿಂದ ಮಾತ್ರವೇ ನಮ್ಮ ನ್ಯಾಯಬದ್ಧ ಹಕ್ಕುಗಳನ್ನು ಪಡೆದುಕೊಳ್ಳಲು ಸಾಧ್ಯ ಎಂದು ಇದರಿಂದ ಮತ್ತೊಮ್ಮೆ ಸಾಬೀತಾಗಿದೆ.

'ಮೇ 1, ಕಾರ್ಮಿಕರ ದಿನ' ಜಗತ್ತಿನೆಲ್ಲೆಡೆ ಕಾರ್ಮಿಕರ ಹೋರಾಟದ ಮಹತ್ವವನ್ನು ಎತ್ತಿ ಹಿಡಿಯುವ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಗ್ರಾಮೀಣ ಪ್ರದೇಶಗಳಲ್ಲೂ ಕಾರ್ಮಿಕರನ್ನು ಸಂಘಟಿಸುತ್ತಿದ್ದು, 2015ರ ಕಾರ್ಮಿಕ ದಿನಾಚರಣೆಯನ್ನು ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ ಆಚರಿಸಲು ಯೋಚಿಸಿದೆ. ಈ ಮೇ ದಿನಾಚರಣೆಯಂದು ಗಾರ್ಮೆಂಟ್ ಕಾರ್ಮಿಕರು.

- ಬದುಕುವ ವೇತನ
- ಸೇವಾ ಹಿರಿತನ ಹಾಗೂ
- ಕೆಲಸದ ಸ್ಥಳದಲ್ಲಿ ಗೌರವ ಘನತೆಗಾಗಿ ಆಗ್ರಹಿಸಿ.

ಮದ್ದೂರಿನ ಹಳೆ ಬಸ್‌ಸ್ಟ್ಯಾಂಡ್‌ನಿಂದ ಹೊರಟು ಪೇಟೆ ಬೀದಿ, ಮತ್ತು ಟಿ.ಬಿ. ಸರ್ಕಲ್ ಮುಖಾಂತರ ಅಂಬೇಡ್ಕರ್ ಭವನದವರೆಗೂ ರ್‍ಯಾಲಿಯಲ್ಲಿ ನಡೆದು ಅಂಬೇಡ್ಕರ್ ಭವನದಲ್ಲಿ ಸಾರ್ವಜನಿಕ ಸಭೆ ನಡೆಸಲಿದ್ದಾರೆ.

ಅಂದು ನಮ್ಮೊಂದಿಗೆ

**ಶ್ರೀ ಭೂಷಣ್ ಗುಲಾಬ್ ರಾವ್ ಬೋರಸೆ** *IPS, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಮಂಡ್ಯ*

**ಶ್ರೀ ಜೆ.ಟಿ. ಜಿಂಕಲಪ್ಪ,** *ಅಡಿಷನಲ್ ಲೇಬರ್ ಕಮಿಷನರ್*

**ಎಚ್.ವಿ. ವಾಸು,** *ಸಂಚಾಲಕರು, ಕರ್ನಾಟಕ ಜನಶಕ್ತಿ*

**ಶಕೂನ್ ಮೋಹಿನಿ,** ವಿಮೋಚನಾ ಇವರುಗಳು ಭಾಗವಹಿಸುತ್ತಿದ್ದಾರೆ.

*ತಾವೆಲ್ಲರೂ ಈ ಹಕ್ಕೊತ್ತಾಯಕ್ಕೆ ಧ್ವನಿ ಸೇರಿಸಿ, ರ್‍ಯಾಲಿ ಹಾಗೂ ಸಭೆಯಲ್ಲಿ ಭಾಗವಹಿಸಬೇಕೆಂದು*
*ನಾವು ಈ ಮೂಲಕ ಕರೆ ನೀಡುತ್ತಿದ್ದೇವೆ.*

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ನಂ. 17/1, ಹೊಸಗುಡ್ಡದ ಹಳ್ಳಿ, ಮೈಸೂರುರಸ್ತೆ,
ಬೆಂಗಳೂರು-560 026, ಮೊ.: 9844714476, 8792156541, 9901290495

Scanned with OKEN Scanner